ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಪಿಂಚಣಿ ಯೋಜನೆ ಕುರಿತು

ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶನ ಹೊಂದಿದವರು) –

435 (590) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ನೂತನ ಪಿಂಚಣಿ ಯೋಜನೆಯಿಂದ ಹಿಂದಿನ ಪಿಂಚಣಿ ಯೋಜನೆಗೆ ವರ್ಗಾವಣೆಗೊಳ್ಳಲು ಎಷ್ಟು ಮಂದಿ ಸರ್ಕಾರಿ ನೌಕರರು ಮತ್ತು ಅಧಿಕಾರಿಗಳಿಂದ ಕೋರಿಕೆಗಳನ್ನು ಸರ್ಕಾರವು ಸ್ವೀಕರಿಸಿದೆ; (ಕೇಂದ್ರ ಸರ್ಕಾರವು ನ್ಯಾಯಾಲಯದ ಆದೇಶದಂತೆ ಮಾರ್ಪಡಿಸಿರುವ ರೀತಿಯಲ್ಲಿ)

(ಆ) ಈ ಕುರಿತು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ತೀರ್ಮಾನವು ವಿಳಂಬವಾದಂತೆ ಅಧಿಕಾರಿಗಳ ಮತ್ತು ನೌಕರರ ವೇತನದಿಂದ NPC ಬಾಬ್ತು ಕಟಾಯಿಸುವ ಸಮಸ್ಯೆಯಿಂದ ಸರ್ಕಾರ ಪಾರು ಮಾಡುವುದೇ;

(ಈ) ಕೇಂದ್ರ ಸರ್ಕಾರದ ಮಾದರಿಯನ್ನು ಕೂಡಲೇ ರಾಜ್ಯ ಸರ್ಕಾರ ಜಾರಿಗೊಳಿಸುವುದೇ?